## ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ:ವಿವಾದ:136/2014-15 ದಿ:16-09-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

| ವಾದಿಗಳು | ಪ್ರತಿವಾದಿಗಳು |
|---|---|
| ಕೆ. ರಾಮಚಂದ್ರ ರಾವ್ ತಂದೆ: ಕೊಡಾಲಿ ಸುಬ್ಬಾರಾವ್<br>ಎಂ.ಸೂಗೂರು ಗ್ರಾಮ, ಸಿರುಗುಪ್ಪ ತಾಲೂಕ | ವೆಂಕಟೇಶ್ವರ ರಾವ್ ತಂದೆ: ಕೊಡಾಲಿ ಸುಬ್ಬಾರಾವ್<br>ಎಂ.ಸೂಗೂರು ಗ್ರಾಮ, ಸಿರುಗುಪ್ಪ ತಾಲೂಕ |

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ: | ವಹಿವಾಟು ಸಂಖ್ಯೆ: |
|---|---|---|---|---|
| ಮೈಲಾಪುರ ಗ್ರಾಮ | 54/D1 | 1-02 | H-49/2013-14 | 129/2013-14 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ **ಮೈಲಾಪುರ ಗ್ರಾಮದ ಸ.ನಂ.54/D1** ವಿಸ್ತೀರ್ಣ **1-02 ಎಕರೆ** ಜಮೀನಿಗೆ ಸಂಭಂದಿಸಿದಂತೆ **ಪೋತಿ ವಾರಸತ್ವ ಪ್ರಕಾರ ಕೊಡಾಲಿ ಸುಬ್ಬಾರಾವ್‌ಬೂದುಗುಪ್ಪ ಇವರ ಹೆಸರಿಂದ ಕೆ. ರಾಮಚಂದ್ರ ರಾವ್ ತಂದೆ: ಕೊಡಾಲಿ ಸುಬ್ಬಾರಾವ್, ಎಂ.ಸೂಗೂರು ಇವರ ಹೆಸರಿನಲ್ಲಿ** ಖಾತೆಬದಲಾವಣೆ ಮಾಡಲು ನಮೂನೆ-21ನ್ನು ಪ್ರಚುರ ಪಡಿಸಲಾಗಿ. ನಿಗದಿತ ಅವಧಿಯೊಳಗೆ **ವೆಂಕಟೇಶ್ವರ ರಾವ್ ತಂದೆ: ಕೊಡಾಲಿ ಸುಬ್ಬಾರಾವ್, ಎಂ. ಸೂಗೂರು ಇವರು ದಿ:15-02-2014 ರಂದು** ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನುದಿ: **14-08-2015, 01-02-2015, 29-04-2016, 27-05-2016, 01-07-2016, 29-07-2016,** ಮತ್ತು **02-09-2016** ರಂದು **ಪ್ರಕರಣಕ್ಕೆ** ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳಾದ ಕೆ.ರಾಮಚಂದ್ರ ರಾವ್ ತಂದೆ: ಲೇಟ್ ಕೊಡಾಲಿ ಸುಬ್ಬಾರಾವ್, ಮಣ್ಣೂರು ಸೂಗೂರು ಗ್ರಾಮ ಸಿರುಗುಪ್ಪ ತಾಲೂಕ ಇವರು ಮೈಲಾಪುರ ಗ್ರಾಮದ ಸ.ನಂ.54/D1 ವಿಸ್ತೀರ್ಣ 1-02 ಎಕರೆ ನನ್ನ ತಂದೆಯಾದ ಕೊಡಾಲಿ ಸುಬ್ಬಾರಾವ್ ತಂದೆ: ಕೊಡಾಲಿ ಬಸವಯ್ಯ ಇವರ ಹೆಸರಿನಲ್ಲಿದ್ದು, ಪೋತಿ ವಾರಸತ್ವ ಪ್ರಕಾರ ಕೆ. ರಾಮಚಂದ್ರ ರಾವ್ ತಂದೆ: ಕೊಡಾಲಿ ಸುಬ್ಬಾರಾವ್ ಇವರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡುವ ಸಂದರ್ಭದಲ್ಲಿ ಕೆ.ವೆಂಕಟೇಶ್ವರರಾವ್ ತಂದೆ: ಕೆ.ಸುಬ್ಬಾರಾವ್ ಇವರು ವಿನಾಕಾರಣ ಆಧಾರ ರಹಿತವಾಗಿ ಹಕ್ಕುಬದಲಾವಣೆಗೆ ತಕರಾರುಅರ್ಜಿ ಸಲ್ಲಿಸಿದ್ದು ಯಾವುದೇ ವಿಚಾರಣೆಗೆ ಹಾಜರಾಗಿರುವುದಿಲ್ಲ. ಮತ್ತು ಯಾವುದೇ ಲಿಖಿತ ಹೇಳಿಕೆಗಳನ್ನು ಸಹ ನೀಡಿರುವುದಿಲ್ಲ. ಕಾರಣ ಅವರ ನಿರಾಧಾರವಾದ ತಕರಾರು ಅರ್ಜಿಯನ್ನು ತಳ್ಳಿಹಾಕಿ ಪೋತಿ ವಾರಸತ್ವ ಪ್ರಕಾರ ಹಕ್ಕು ಬದಲಾವಣೆಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ ಕೆ. ವೆಂಕಟೇಶ್ವರ ರಾವ್ ತಂದೆ: ಕೊಡಾಲಿ ಸುಬ್ಬಾರಾವ್, ಎಂ.ಸೂಗೂರು ಗ್ರಾಮ ಇವರು ಮೈಲಾಪುರ ಗ್ರಾಮದ ಸ.ನಂ.54/D1 ವಿಸ್ತೀರ್ಣ 1-02 ಎಕರೆ ಕೊಡಾಲಿ ಸುಬ್ಬಾರಾವ್ ತಂದೆ: ಕೊಡಾಲಿ ಬಸವಯ್ಯ ಇವರ ಹೆಸರಿನಲ್ಲಿದ್ದು ಪೋತಿ ವಾರಸತ್ವ ಪ್ರಕಾರ ಕೆ.ರಾಮಚಂದ್ರ ರಾವ್ ತಂದೆ: ಕೊಡಾಲಿ ಸುಬ್ಬಾರಾವ್ ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡುವ ಸಂದರ್ಭದಲ್ಲಿ ತಕರಾರು ಅರ್ಜಿ ಸಲ್ಲಿಸಲಾಗಿ ದಿ:14-08-2015 ರಂದು ಮಾತ್ರ ವಿಚಾರಣೆಗೆ ಹಾಜರಾಗಿರುತ್ತಾರೆ. ಉಳಿದ ವಿಚಾರಣಾ ದಿನಾಂಕಗಳಂದು ಹಾಜರಾಗದೇ ಯಾವುದೇ ಲಿಖಿತ ಹೇಳಿಕೆಗಳನ್ನಾಗಲೀ, ಸಂಭಂದ ಪಟ್ಟ ದಾಖಲೆ ಗಳನ್ನಾಗಲೀ ನೀಡಿರುವುದಿಲ್ಲ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ, ವಿಚಾರಣೆ ಮಾಡಲಾಗಿ, ಸದರಿ ಜಮೀನು ಪೋತಿ ವಾರಸತ್ವ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಮೈಲಾಪುರ ಗ್ರಾಮದ ಸ.ನಂ.54/D1 ವಿಸ್ತೀರ್ಣ 1-02 ಎಕರೆ ಜಮೀನು ಪೋತಿ ವಾರಸತ್ವ ಪ್ರಕಾರ ಕೆ. ರಾಮಚಂದ್ರರಾವ್ ತಂದೆ: ಲೇಟ್ ಕೊಡಾಲಿ ಸುಬ್ಬಾರಾವ್ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 16 -09-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು,
ನಾಡ ಕಛೇರಿ, ಕರೂರು.
ಸಿರುಗುಪ್ಪ ತಾಲೂಕು

ಇದರ ಪ್ರತಿಯನ್ನು:
1, ವಾದಿ ಹಾಗೂ ಪ್ರತಿವಾದಿಗಳು
2, ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ